INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -6, March-April, 2022,
PageNo,18-28
Peer Reviewed Journal, Referred Journal

# ಕರ್ನಾಟಕ ರಾಜ್ಯದಲ್ಲಿ ಬೌದ್ಧ ವಾಸ್ತುಶಿಲ್ಪಗಳು ಮತ್ತು ಶಿಲ್ಪಗಳು: ಒಂದು ಅವಲೋಕನ

**ಬಾಬು.ಕೆ.ಸಿ.**[1]

ಪ್ರಪಂಚದ ಎಲ್ಲೆಡೆಗಳಂತೆಯೇ ಭಾರತದಲ್ಲಿಯೂ ಕೂಡ ವಾಸ್ತುಶಿಲ್ಪದ ಆರಂಭದ ಹೆಜ್ಜೆಗಳನ್ನು ಗುರುತಿಸಬಹುದು.ಅದು ಬೌದ್ಧ ಮತ್ತು ಬೌದ್ಧಧಮ್ಮದ ಪ್ರಚಾರ ಸಂದರ್ಭದ ಭಾರತದಲ್ಲಿ ಹೆಚ್ಚು ಪ್ರಖರವಾಗಿಯೇ ಅಭಿವೃದ್ಧಿಗೊಂಡಿರುತ್ತದೆ.ಈ ರೀತಿ ಅಭಿವೃದ್ಧಿಗೊಂಡಿರುವ ಬೌದ್ಧಧಮ್ಮವನ್ನು ಹೆಚ್ಚು ಶಾಶ್ವತ ಮತ್ತು ಪ್ರಚಾರಗೊಳಿಸುವ ಸಲುವಾಗಿಯೇ ಕಾಲಾನುಕ್ರಮದಲ್ಲಿ ವಾಸ್ತುಶಿಲ್ಪ ರಚಿತಗೊಂಡಿರುತ್ತದೆ. ಈ ವಾಸ್ತುಶಿಲ್ಪವು ಬಹುಮುಖ್ಯವಾಗಿ ಮೂರು ವಿಧಗಳನ್ನು ಹೊಂದಿರುತ್ತದೆ. ಅವುಗಳೆಂದರೆ; ವಿಹಾರಗಳು, ಅವಶೇಷಗಳನ್ನು ಪೂಜಿಸುವ ಸ್ಥಳಗಳು ಅಂದರೆ, ಸ್ತೂಪಗಳು, ಪ್ರಾರ್ಥನಾ ಮಂದಿರಗಳು ಅಂದರೆ, ಚೈತ್ಯಗಳು, ಚೈತ್ಯಗೃಹಗಳು ಎಂದೂ ಕೂಡ ಕರೆಯಲಾಗುತ್ತದೆ. ಇವುಗಳೆಲ್ಲವನ್ನೂ ಭಾರತಕ್ಕೆ ಪ್ರಪ್ರಥಮ ಬಾರಿಗೆ ಸಾಮ್ರಾಟ್ ಅಶೋಕ ಮಹಾರಾಜ ಅವರು ಪರಿಚಯಿಸಿ ಸ್ಥಾಪಿಸಿದವರು. ಹಾಗೆಯೇ, ಕ್ರಿ.ಪೂ.ಮೂರನೆಯ ಶತಮಾನದಲ್ಲಿ ಬ್ರಾಹ್ಮೀಲಿಪಿ, ಪ್ರಾಕೃತ ಭಾಷೆಯನ್ನು ದಖ್ಖನ್ನಿಗೂ ಕೂಡ ಪರಿಚಯಿಸಿದವರೇ ಅಶೋಕ ಸಾಮ್ರಾಟ. ಈ ಬೌದ್ಧ ವಾಸ್ತುಶಿಲ್ಪಗಳನ್ನು ಕೂಡ ಈತನೆ ಪರಿಚಯಿಸಿದನು. ಬೌದ್ಧಧಮ್ಮದ ಅನುಯಾಯಿಗಳು ಪ್ರಾಕೃತಿಕ ಪರಿಸರದಲ್ಲಿ ಬೆಟ್ಟಗಳಲ್ಲಿನ ಬೃಹತ್ ಬಂಡೆಗಳನ್ನು ಕೊರೆದು ಗುಹಾಲಯಗಳನ್ನು ನಿರ್ಮಾಣಮಾಡಿದರು. ಸರಿಸುಮಾರು 6–8ನೇ ಶತಮಾನಗಳಲ್ಲಿ ಬಾದಾಮಿ, ಎಲಿಫೆಂಟಾ, ಎಲ್ಲೋರ, ಮಹಾಬಲಿಪುರಂ ಮುಂತಾದ ಸ್ಥಳಗಳಲ್ಲಿ ಬೌದ್ಧ ಗುಹಾಲಯಗಳು ನಿರ್ಮಾಣಗೊಂಡಿರುವುದನ್ನು ಗುರುತಿಸಬಹುದು. ಆದರೆ, ಪ್ರಪ್ರಥಮ ಬಾರಿಗೆ ದಖ್ಖನ್ ಪ್ರದೇಶವು ಕಂಡ ಈ ಸಾರ್ವಭೌಮ (ಇಂಪೀರಿಯಲ್) ಕಲೆಯನ್ನು ಮೌರ್ಯ ಸಾಮ್ರಾಟರ ಕಲೆ ಎಂದೇ ಕರೆಯಲಾಗಿದೆ. ದೇಶದಾದ್ಯಂತ ವ್ಯಾಪಿಸಿದ್ದ ಈ ಮೌರ್ಯ ಸಾಮ್ರಾಜ್ಯದ ಕೆಲವು ಆಯ್ದ ಕೇಂದ್ರಗ.ಳಲ್ಲಿ ಸಾಕಷ್ಟು ವಿಸ್ತಾರವಾಗಿ, ಇನ್ನುಳಿದೆಡೆ ಸಾಂಕೇತಿಕವಾಗಿ ಈ ವಾಸ್ತುಶಿಲ್ಪದ ಕಲೆಯು ಹೆಚ್ಚಿನದ್ದಾಗಿಯೇ ನೆಲೆಗೊಂಡಿತ್ತು ಎಂದು ಹೇಳಬಹುದು. ಸಾಮ್ರಾಟ್ ಅಶೋಕನ ವೈಯಕ್ತಿಕ ಪೋಷಣೆಯಡಿ ಅಂಕುರಗೊಂಡ ಈ ಕಲೆಯ ಆರು ಪ್ರಭೇದಗಳನ್ನು ಗುರುತಿಸಬಹುದಾಗಿದೆ. ಅವುಗಳೆಂದರೆ;

---

**1. ಸಂಶೋಧಕರು, ಇತಿಹಾಸ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ಕೇಂದ್ರ,ಸರ್ಕಾರಿ ಕಲಾ ಕಾಲೇಜು, ಬೆಂಗಳೂರು–01**

1. ಆರು ಬಗೆಯ ರಾಜಶಾಸಗಳು
2. ವಿಶಿಷ್ಟ ವಿನ್ಯಾಸದ ಸ್ತಂಭಗಳು
3. ಸ್ತೂಪ ಅಥವಾ ಚೈತ್ಯಗಳು
4. ಗುಹಾಲಯಗಳು
5. ಸಚಿತ್ರ ಫಲಕಗಳು, ಶಿಲ್ಪಗಳು ಹಾಗೂ ದುಂಡುಗಾಲಿಗಳು
6. ಅರಮನೆ, ಕೋಟೆ ಮುಂತಾದ ಕಟ್ಟಡಗಳು.

ಇವುಗಳಲ್ಲಿ ಬಂಡೆಗಲ್ಲು ಶಾಸನ, ಸ್ತಂಭಾವಶೇಷ ಮತ್ತು ಆರಂಭ ಕಾಲದ ಸರಳ ಸ್ತೂಪಾವಶೇಷಗಳನ್ನು ಹೊರತುಪಡಿಸಿ, ಇನ್ನುಳಿದ ವಾಸ್ತು ಪ್ರಭೇದಗಳು ದಖ್ಖನನನ್ನು ಪ್ರವೇಶಿಸಿದ್ದು, ಅಲ್ಪ ಪ್ರಮಾಣದಲ್ಲಿ ಮಾತ್ರ, ಅಂದರೆ, ಸಾರನಾಥ, ರಾಮಪೂರ್ವ, ಸಂಕಿಪ್ಸ, ಅಲಹಾಬಾದ್ ಮುಂತಾದ ಕಡೆಗಳಲ್ಲಿ ಸ್ಥಾಪಿಸಿದ ಪೂರ್ಣಪ್ರಮಾಣದ ಸ್ತಂಭಗಳು, ಬರಾಬರ್ ಬೆಟ್ಟದ ಬುಡದಲ್ಲಿ ತೋಡಿಸಿದ ಗುಹಾಲಯಗಳು, ನಳಂದಾದಲ್ಲಿ ನಿರ್ಮಿಸಿದ ವಿಹಾರಗಳು, ಮಹಾಬೋಧಿಯಲ್ಲಿ ಸ್ಥಾಪಿಸಿದನೆನ್ನಲಾಗಿದ್ದ ದೇವಾಲಯಗಳು, ಇದೇ ಪ್ರಮಾಣದಲ್ಲಿ ದಖ್ಖನ್‌ನನ್ನು ತಲುಪಲಿಲ್ಲವೆಂದರ್ಥ. ಇದೇನೆ ಇದ್ದರೂ ಸ್ತೂಪ ನಿರ್ಮಾಣವು ದಖ್ಖನ್‌ನಲ್ಲಿ ಪ್ರಾರಂಭವಾಗಿದ್ದು ಈ ಅರಸನ ಕಾಲದಲ್ಲಿ ಎಂಬುದನ್ನು ಯಾರೂ ಕೂಡ ಪ್ರಶ್ನಿಸುವಂತಿಲ್ಲ. ಮೌರ್ಯರ ಕಾಲದವುಗಳೆಂದು ನಿಖರವಾಗಿ ಹೇಳಬಲ್ಲ ಶಿಲ್ಪಗಳು ದಖ್ಖನ್‌ನಲ್ಲಿ ಉಳಿದುಕೊಂಡಿರುವುದು ತುಂಬಾ ಕಡಿಮೆಯೇ. ಅಂದರೆ ಈ ಶೈಲಿಯವೆಂದು ಲೋಕಮಾನ್ಯತೆ ಪಡೆದಿರುವರು ಬೆಸ್ನಗರ, ಪರ್ಕಾಣ, ದೀದರ್‌ಗಂಜ್, ಧೌಲಿ ಮುಂತಾದೆಡೆಯಲ್ಲಿರುವ ಶಿಲ್ಪಗಳಾಗಲೀ, ಅಹಿಚ್ಛತ್ರ, ಪಾಟಲೀಪುತ್ರ, ತಕ್ಷಶಿಲಾ ಮುಂತಾದೆಡೆಯಲ್ಲಿರುವ ಮೃಣ್ಮೂರ್ತಿಗಳಾಗಲೀ, ದಖ್ಖನ್‌ದಲ್ಲಿ ದೊರೆಕಿಲ್ಲವೆಂದರ್ಥ.

ಒಂದು ಬೌದ್ಧ ಐತಿಹ್ಯ (ಮಹಾಪರಿನಿರ್ವಾಣ ಸುತ್ತ)ದ ಪ್ರಕಾರ; ಅಶೋಕನು ೮೪,೦೦೦ ಸ್ತೂಪಗಳನ್ನು ನಿರ್ಮಿಸಿದ್ದನು. ಈ ಸಂಖ್ಯೆಯಲ್ಲಿ ಅತಿಶಯತೆ ಇದ್ದರೂ ಸ್ತೂಪ ನಿರ್ಮಾಣಕ್ಕೆ ವಿಶೇಷ ಗಮನವನ್ನು ಕೊಟ್ಟಂತಹ ಮೊಟ್ಟಮೊದಲ ಸಾಮ್ರಾಟನು ಅಶೋಕ ಎನ್ನುವುದರಲ್ಲಿ ಯಾವುದೇ ಅನುಮಾನಿಸುವಂತಿಲ್ಲ. ಸಾಂಚಿ ಮತ್ತು ಸಾರನಾಥದಲ್ಲಿನ ಸ್ತೂಪಗಳ ಅಡಿಪಾಯವನ್ನು ಅಶೋಕನೇ ಹಾಕಿದ್ದನೆನ್ನುವುದನ್ನು ಸಾಧಿಸಿ ತೋರಿಸಿದಂತೆ ಆಂಧ್ರದ ಧಾನ್ಯಕಟಕ (ಅಮರಾವತಿ) ಮಹಾಸ್ತೂಪದ ಅಡಿಗಲ್ಲನ್ನೂ ಈತನೇ ಹಾಕಿದ್ದನ್ನು ದೃಢೀಕರಿಸಲಾಗಿದೆ. ಈತನು ಬರೆಸಿದ ತೃಟಿತ ಸ್ತಂಭಶಾಸನ ಅಲ್ಲದೆ ಇನ್ನೂ ಕೆಲವು ಮೌರ್ಯ ಕಾಲದ ಕುರುಹುಗಳು ಅಮರಾವತಿಯಲ್ಲಿ ದೊರೆಕಿವೆ. ಇವುಗಳಲ್ಲಿ ಮೌರ್ಯ ವಿಶೇಷವೆನಿಸಿರುವ ಹೊಳಪಿನ ಕಗ್ಗಲ್ಲ ಸ್ತಂಭ ಹಾಗೂ ಶಿಲ್ಪಗಳು ಗಮನಾರ್ಹವಾದವುಗಳು. ಅಶೋಕನು ಇಲ್ಲಿ ನಿಲ್ಲಿಸಿದ ಚತುರ್ಮುಖ ಸ್ತಂಭದ ಮೇಲೆ ಬರೆದ ರಾಜ ಶಾಸನದಲ್ಲಿ 'ಚೇತಿಯಾ', 'ಸಾಲಾ', 'ಸಿವನ' (ಸಾಲವನ), 'ಚೇತವನ', 'ಆರಾಮ', ಮತ್ತು 'ವಿಹಾರಗಳ ಉಲ್ಲೇಖಗಳಿವೆ.

ಅಶೋಕನ ಉಪಸ್ಥಿತಿಯನ್ನು ದಖ್ಖನ್‌ನಲ್ಲಿ ಸಾಬೀತುಪಡಿಸುವ ಹಲವು ಇನ್ನಿತರ ಕುರುಹುಗಳಲ್ಲಿ ಆತನ ಶಾಸನಗಳಲ್ಲದೆ, ಸುಮಾರು 65 ಅಡಿ ಎತ್ತರದ ಭಟ್ಟಿಪ್ರೊಳ ಸ್ಮಾರಕವೂ ಒಂದಾಗಿವೆ. ವಿಶಾಖಪಟ್ಟಣ ಜಿಲ್ಲೆಯ ತೊಟ್ಲಕೊಂಡದ ಮಹಾಸ್ತೂಪ, ಗಜಪೃಷ್ಠಾಕಾರ ಹಾಗೂ ವೃತ್ತಾಕಾರ ತಳಪಾಯದ ಚೈತ್ಯಗಳು, ಸಭಾ ಮಂಟಪಗಳೂ ಈತನ ಕಾಲದವುಗಳೆಂಬುದು ರುಜುವಾತಾಗಿದೆ. ಇವುಗಳಲ್ಲಿ ಕೆಲವು ಸ್ವತಃ ಅಶೋಕನಿಂದ ಇನ್ನು ಕೆಲವು ಸಮಕಾಲೀನ ಬೌದ್ಧ ಅನುಯಾಯಿಗಳಿಂದ ಸ್ಥಾಪಿಸಲ್ಪಟ್ಟಿದ್ದವು. ಈಗ 'ಪರ್ವತಗುಹಾ' ಎಂದು ಕರೆಯಲ್ಪಡುವ ಪ್ರಕಾಶಮ್ ಜಿಲ್ಲೆಯ ಮಲಕೊಂಡ ಗುಹಾಲಯವನ್ನು ನಂದಸೇತಿಯ ಪುತ್ರ ವೀರಸೇಥಿ ಎಂಬ ಅರವ ಕುಲಜ (ತಮಿಳುವಂಶಜ)ನು ಈ ಕಾಲದಲ್ಲಿಯೇ ತೋಡಿಸಿದ್ದಕ್ಕೆ ಶಾಸನ ಸಾಕ್ಷಿ ದೊರೆಕಿದೆ. ಇತ್ತೀಚಿನವರೆಗೂ ಮೌರ್ಯರ ಕಾಲದ ಕುರುಹುಗಳನ್ನು ಆಂಧ್ರಪ್ರದೇಶದಲ್ಲಿ ಮಾತ್ರ ನಿರೀಕ್ಷಿಸಲಾಗಿತ್ತು.ಅದು ಬದಲಾಗಿ ಈಗ ಈ ನಿರೀಕ್ಷೆ ಕರ್ನಾಟಕಕ್ಕೆ ವಿಸ್ತರಿಸಿದೆ.ಕಳೆದೆರಡು ದಶಕಗಳಲ್ಲಿ ಈ ಅರಸನ ಕಾಲದ ಬೃಹತ್ ಬೌದ್ಧ ಸ್ಮಾರಕವೊಂದು ಭೀಮಾತೀರದ (ಕಲಬುರಗಿಜಿಲ್ಲೆಯ) ಸನ್ನತಿಯ ಕನಗನಹಳ್ಳಿಯಲ್ಲಿ ಅನಾರವಣಗೊಂಡಿದೆ.

ಕನಕನಹಳ್ಳಿಯಲ್ಲಿ ಕಾಣಿಸಿಕೊಂಡಿರುವ ಮಹಾಸ್ತೂಪವು ಅಶೋಕನ ಕಾಲದಲ್ಲಿ ಒಂದು ಮಣ್ಣಿನ ಬೃಹತ್ ದಿನ್ನೆ ಮಾತ್ರವಾಗಿತ್ತು ಮತ್ತು ಶಿಲ್ಪ ಕವಚದಿಂದ ಪೂರ್ಣಮುಕ್ತವಾಗಿತ್ತು. ಅಶೋಕನು ಇಲ್ಲಿ ನಿಲ್ಲಿಸಿದ್ದ ಉಸುಕು ಕಲ್ಲಿನ ಸಿಂಹಸ್ತಂಭದ ಅವಶೇಷವು ಬಾರ್‌ಹುತ್ ಸ್ತಂಭಸಿಂಹಾಗ್ರವನ್ನು ನೆನಪಿಸಿಕೊಡುವುದು. ಇದರೊಡನೆ ಮೌರ್ಯರ ಕಾಲದ ವೈಶಿಷ್ಟ್ಯಗಳಾದ ಹೊಳಪಿನ ಕಪ್ಪು ಮಡಕೆಯ ಮುಕ್ಕುಗಳು ಬೆಳ್ಳಿಯ ಒತ್ತು ನಾಣ್ಯ (ಪಂಚ್ ಮಾರ್ಕ್)ಗಳು ದೊರಕಿವೆ. ಇವೆಲ್ಲ ಆಧಾರಗಳು ಅಶೋಕನ ಕಾಲದಲ್ಲಿಯೇ ಕನಗನಹಳ್ಳಿಯು ಒಂದು ಬೌದ್ಧ ಕೇಂದ್ರವಾಗಿತ್ತೆಂಬ ವಾದವನ್ನು ಹೆಚ್ಚು ಹೆಚ್ಚು ಬಲಪಡಿಸಿವೆ ಎಂದು ಗುರುತಿಸಬಹುದು. ಈ ಸ್ತೂಪದಲ್ಲಿ ಅಶೋಕನ ಸುಂದರ ಭಾವಶಿಲ್ಪಗಳು ಮತ್ತು 'ರಾಯ ಅಶೋಕ' ಎಂಬ ಪ್ರಾಕೃತ ಶಾಸನಗಳು ದೊರಕಿವೆ. ಇವು ಈ ಕೇಂದ್ರ ಸ್ಥಾಪಕನ ಗೌರವಾರ್ಥ ನಿರ್ಮಿಸಿದ ಶಿಲ್ಪ ದಾಖಲೆಗಳೆಂಬ ಭಾವನೆಯನ್ನು ಬಲಗೊಳಿಸಿವೆ. ತುಂಬಾ ಸರಳವಾಗಿದ್ದ ಅಶೋಕನ ಕಾಲದ ದಿನ್ನೆಯಾಕಾರದ ಮಣ್ಣಿನ ಸ್ತೂಪವನ್ನು ಮುಂದಿನ ಶತಮಾನಗಳಲ್ಲಿ ವಿಶೇಷವಾಗಿ ಶಾತವಾಹನರ ಕಾಲದಲ್ಲಿ ವಿಸ್ತರಿಸಿ, ಅಲಂಕರಿಸಿ, ಬೃಹತ್ ಪ್ರಮಾಣದ ಮಹಾಚೆತಿಯನ್ನಾಗಿ ಪರಿವರ್ತಿಸಿದ ಹಂತಹಂತದ ಕುರುಹುಗಳು ತೆರೆದುಕೊಂಡಿವೆ. ಇದರಿಂದಾಗಿ ಬ್ರಹ್ಮಗಿರಿ ಮತ್ತು ಸಿದ್ದಾಪುರದ ಕಿರು ಶಾಸನಗಳಲ್ಲಿ ಉಲ್ಲೇಖಿಸಿರುವ ಸುವರ್ಣಗಿರಿಯು ಇದೇ ಕನಕನಹಳ್ಳಿ ಆಗಿರಬಹುದೆಂಬ ಊಹೆಯು ನಿಜವಾಗತೊಡಗಿದೆ. ಆದರೆ, ಈವರೆಗೂ ದೊರೆತ ನೂರಾರು ಪ್ರಾಕೃತ ಶಾಸನಗಳಲ್ಲಿ ಈ ಕೇಂದ್ರದ ಮೂಲ ಹೆಸರನ್ನು ಒಮ್ಮೆಯೂ ಉಲ್ಲೇಖಿಸದಿರುವುದು ಸೋಜಿಗ ತಂದಿದೆ. ಇದರ ಸುಮಾರು ಸಮಕಾಲೀನದ್ದಾದ ಆಂಧ್ರಪ್ರದೇಶ ರಾಜ್ಯದ ಧ್ಯಾನಕಟ್ಟಡವನ್ನು ಕನಗನ್‌ಹಳ್ಳಿಯ ಶಾಸನಗಳು ಸಾಕಷ್ಟು ಬಾರಿ ಹೆಸರಿಸಿವೆ. ಅದರಂತೆ ಕರ್ನಾಟಕದ ಕೂಪಣ (ಕೊಪ್ಪಳ) ಮತ್ತು

ವನವಾಸಿಕ (ಬನವಾಸಿ)ವನ್ನೂ ದೇಶದ ಬೇರೆ ಬೇರೆ ಕಡೆ ಇರುವ ಹೈಮಂತ (ಹಿಮಾಲಯ), ವಾಕಾಟಚ (ವಾಕಾಟಕ), ಧಾರಾಘಾತ್ರಿಕ (ನಾನಾಘಾಟ್?), ಕೊಟೂರು, ಮಹಾಗ್ರಾಮ, ಪತಿಗಾಲಿಯ (ಪಿತಲಖೋರ?), ಸೇತಿವಾಯಕ (ಶ್ರೀವಾಟಿಕ), ಮಹಿಸಕ, ಬಲಿವಾರಕ, ಕೊತುಗಲಿಕ, ಎಂಬ ಬೌದ್ಧಕೇಂದ್ರಗಳನ್ನೂ ಇವು ಹೆಸರಿಸಿವೆ. ಈ ಕೇಂದ್ರದ ಐತಿಹ್ಯವೊಂದು ಮಾನುಷಿಬುದ್ಧ ಕನಕನೊಡನೆ ಇದರ ಪೌರಾಣಿಕ ಸಂಬಂಧವನ್ನು ಕಲ್ಪಿಸಿರುವುದು ಸನ್ನತಿಯ ಎರಡು ಪ್ರಾಕೃತ ಶಾಸನಗಳಲ್ಲಿ 'ಜಯತಿ ಭಗವಾನ್ ಕನಕಸ' ಮತ್ತು 'ಸಿಧಮ್ ಭಗವಾ ಸಮಸ ಬುಧೋ ಕನಕಮುನಿ' ಎಂಬ ಉಕ್ತಿಗಳಿದ್ದು, ಇವು ಕನಕಮುನಿಯ ಸ್ಮರಣೆಗೆ ಸಂಬಂಧಿಸಿದವುಗಾಗಿವೆ. ನಿಗಿಲ ಸಾಗರ ಸ್ತಂಭ ಶಾಸನದಲ್ಲಿ ಕನಕಮಾನ ಸ್ತೂಪವನ್ನು ಅಶೋಕನು ವಿಸ್ತರಿಸಿ ಇಮ್ಮಡಿಗೊಳಿಸಿದ ಹೇಳಿಕೆ ಇದೆ. ಇವೆಲ್ಲವನ್ನೂ ಗಮನಿಸಿದರೆ, ಕನಕನಹಳ್ಳಿ ಎಂಬ ಹೆಸರು ಚಿತ್ರದುರ್ಗ ಜಿಲ್ಲೆಯ ಶಾಸನಗಳಲ್ಲಿ ಅಶೋಕನು ಉಲ್ಲೇಖಿಸಿರುವ ಸುವಣ್ಣಗಿರಿಯಿಂದ ಬಂದಿರುವುದೋ, ಕನಕಮುನಿಯ ಹೆಸರಿನಿಂದ ಬಂದಿರುವುದೋ, ಎಂಬ ದ್ವಂದ್ವಕ್ಕೊಳಪಡಬೇಕಾಗುವುದು.

ದಖ್ಖನ್ನಿನ ಬಹುತೇಕ ಬೌದ್ಧ ಮೂಲದ ಸ್ಮಾರಕಗಳು ತಮ್ಮ ಮೂಲ ಸ್ವರೂಪವನ್ನು ಈಗ ಉಳಿಸಿಕೊಂಡಿಲ್ಲ. ಈ ಪ್ರಕ್ರಿಯೆ ನಾಗಾರ್ಜುನಕೊಂಡದ ಇಕ್ಷ್ವಾಕುಗಳ ಆಳ್ವಿಕೆ ಕೊನೆಗೊಂಡ ಕೂಡಲೇ (ಕ್ರಿ.ಶ. ೩೨೫) ಶುರುವಾಗಿತ್ತು. ಅಷ್ಟರೊಳಗಾಗಿ ಇವು ಹಲವು ಬಾರಿ ನವೀಕರಣಕ್ಕೆ ಒಳಗಾಗಿ, ಮುಂದೆ ಹೆಚ್ಚಿನ ಅನಾದಾರಕ್ಕೊಳಗಾಗಿ, ಕ್ರಮೇಣ ನೆಲಸಮವಾಗತೊಡಗಿದ್ದವು. ಈ ಕಾರಣದಿಂದಾಗಿ ಇವನ್ನು ಮೊದಲು ನಿರ್ಮಿಸಿದ ಮತ್ತು ಅನಂತರ ನವೀಕರಿಸಿದ ವಾಸ್ತುಶಿಲ್ಪಿಗಳ ಮಾಹಿತಿಸಿಗುವುದು ದುರ್ಲಭವಾಗಿದೆ. ಹೀಗಿದ್ದರೂ ಕೂಡ ತಮ್ಮ ಉಚ್ಛ್ರಾಯ ಕಾಲದಲ್ಲಿ ಇವು ದೇಶದ ಬಹುಭಾಗವನ್ನು ವ್ಯಾಪಿಸಿ ಏಕಸ್ವಾಮ್ಯವನ್ನು ಮೆರೆದಿದ್ದವು. ಸಂಸ್ಕೃತ ಭಾಷೆಯು ಶಾಸನ ಪಟಗಳನ್ನು ಪ್ರವೇಶಿಸುವ ಮುನ್ನ ಪ್ರಾಕೃತವು ಹೇಗೆ ಏಕಸ್ವಾಮ್ಯವನ್ನು ಸಾಧಿಸಿಕೊಂಡಿತ್ತೋ ಅದೇ ಬಗೆಯಲ್ಲಿ ವೈದಿಕ ದೇವಾಲಯಗಳು ಧಾರ್ಮಿಕ ಕ್ಷೇತ್ರವನ್ನು ಪ್ರವೇಶಿಸುವ ಮುನ್ನ ಬೌದ್ಧಾಲಯಗಳು ಏಕಸ್ವಾಮ್ಯವನ್ನು ಸಾಧಿಸಿಕೊಂಡಿದ್ದವು. ಬೌದ್ಧರ ಮಾದರಿಗಳು ಯಾವ ಬಗೆಯಲ್ಲಿ ಹಿಂದೂಗಳನ್ನು ಪ್ರಾರಂಭಿಸಿದವೆಂಬುದು ಪ್ರತ್ಯೇಕ ಜಿಜ್ಞಾಸೆ.

ಸುಮಾರು ಅರ್ಧ ಸಹಸ್ರಮಾನಕ್ಕೂ ಹೆಚ್ಚು (ಕ್ರಿ.ಪೂ.೩ ರಿಂದ ಕ್ರಿ.ಶ.೩ರವರೆಗೆ) ಕಾಲಾವಧಿಯಲ್ಲಿ ಬೌದ್ಧರು ಭಾರತದಾದ್ಯಂತ ಬರೆಸಿದ ಸಾವಿರಾರು ಪ್ರಾಕೃತ ಶಾಸನಗಳಲ್ಲಿ ಈಗ ಉಳಿದಿರುವುದು ಸುಮಾರು ೧೮೦೦ ಮಾತ್ರ ಇದರಲ್ಲಿ ಸುಮಾರು ೬೦೦ ಕೆಳದಖ್ಖನ್ನಿನಲ್ಲಿದ್ದು. ಅವು ಅಮರಾವತಿ, ಕನಗನಹಳ್ಳಿ ಮತ್ತು ನಾಗಾರ್ಜುನಕೊಂಡದಲ್ಲಿ ಹೆಚ್ಚು ಕೇಂದ್ರಿಕೃತವಾಗಿವೆ ಎಂಬುದು ಅಧ್ಯಯನಗಳಿಂದ ಸಾಬೀತುಗೊಂಡಿರುತ್ತದೆ. ಇವುಗಳಲ್ಲಿ ವಾಸ್ತುಶಿಲ್ಪಿಗಳ ಮೇಲೆ ಬೆಳಕು ಚೆಲ್ಲುವ ಶಾಸನಗಳು ಮೂರ್‍ನಾಲ್ಕು ಡಜನ್ ಮೀರಲಾರವೆನಿಸುವುದು. ಈ ಅಲ್ಪ ಮಾಹಿತಿಯನ್ನು ಆಧರಿಸಿ ಬೌದ್ಧರ ಕಲಾ ಇತಿಹಾಸವನ್ನು

ರಚಿಸುವುದು ಇದಕ್ಕೆ ಕಾರಣರಾದ ವಾಸ್ತುಶಿಲ್ಪಗಳನ್ನು ಗುರುತಿಸುವುದು, ಸ್ವಲ್ಪ ಶ್ರಮದಾಯಕವೇನೋ ನಿಜ. ಆದರೆ, ಇದೊಂದು ರೋಮಾಂಚಕ ಅನುಭವವೇ ಆಗಿರುತ್ತದೆ ಎಂದೇ ಹೇಳಬಹುದು.

ಬೌದ್ಧರ ಪ್ರಧಾನ ವಾಸ್ತುವಿಶೇಷಗಳನ್ನು ಗುರುತಿಸಿದಾಗ; ಧೂಪ. ಚೆತಿಯಘರ ಮತ್ತು ವಿಹಾರ. ಈ ಮೂರೂ ಪದಗಳು ಬುದ್ಧಪೂರ್ವ ಕಾಲದಲ್ಲಿಯೇ ಬಳಕೆಯಲ್ಲಿದ್ದವೆಂಬ ವಾದವಿದೆ. ಇದನ್ನು ಒಪ್ಪಿಕೊಂಡರು ಇವು ನಿಶ್ಚಿತ ವಾಸ್ತುಘಟಕಗಳನ್ನು ಪ್ರತಿನಿಧಿಸತೊಡಗಿದ್ದು, ಬೌದ್ಧರಡಿಯಲ್ಲಿಯೇ ಎನ್ನುವುದನ್ನು ಅನುಮಾನಿಸುವಂತಿಲ್ಲ. ಈ ಧಾರ್ಮಿಕ ಸಂಸ್ಥೆಗಳ ನಿರ್ಮಾಣದ ಹಿಂದೆ ಅಪಾರ ಬೌದ್ಧಿಕ ಮತ್ತು ದೈಹಿಕ ಪರಿಶ್ರಮ ವಿನಿಯೋಗವಾಗಿರಬೇಕೆನಿಸುವುದು, ಏಕೆಂದರೆ, ಇವುಗಳ ವಿನ್ಯಾಸ, ರಚನಾ ವಿಧಾನ ಮತ್ತು ಅಲಂಕಾರ ಸಂಹಿತೆಗೆ ಆ ಪೂರ್ವದ ಮಾದರಿಗಳಾವುವು ಇರಲಿಲ್ಲ. ಇವುಗಳಲ್ಲಿ ಕೆಲವು ಕಲ್ಲು, ಮಣ್ಣು, ಇಟ್ಟಿಗೆಗಳ ಕಟ್ಟಡಗಳಾಗಿದ್ದರೆ, ಇನ್ನೂ ಕೆಲವು ಬೆಟ್ಟ ಇಲ್ಲವೆ ಬೃಹತ್ ಬಂಡೆಗಳನ್ನು ಕೊರೆದು ಮಾಡಿದ ಗುಹಾಲಯಗಳಾಗಿವೆ. ಈ ಎರಡೂ ಪ್ರಭೇದಗಳು ಅಲ್ಲಿಯವರೆಗೂ ದೇಶವು ಕಂಡರಿಯದ ಅದ್ಭುತಗಳಾಗಿದ್ದವು.

ಸ್ಮಾರಕಗಳ ನಿರ್ಮಾಣದ ಮಹತ್ವದ ಕಾರ್ಯದಲ್ಲಿ ಕೆಲವು ಕುಶಲ ಹಸ್ತಗಳು ಇನ್ನು ಕೆಲವು ಸೃಜನಾತ್ಮಕ ಮನಸ್ಸುಗಳು ಸೇರಿಕೊಂಡಿದ್ದವು. ಮೊದಲ ವರ್ಗವನ್ನು ಸಾಂಚೀ, ಸಾಲಿಹುಂಡಮ್ ಮತ್ತು ಬನವಾಸಿಯಲ್ಲಿ 'ಕಮಿಕ', 'ಕಮಂತಿಕ, ಮತ್ತು 'ಕಮರಿಕ' ಎಂಬ ಪದಗಳಿಂದ ಗುರುತಿಸಲಾಗಿದೆ. ಇದರಲ್ಲಿ ಸೇರಿದ ಇನ್ನೂ ಕೆಲವು ವೃತ್ತಿ ವರ್ಗಗಳಲ್ಲಿ ಸುವರ್ಣಕಾರ, ಮಣೀಕಾರ, ಲೋಹಕಾರ, ಕಮ್ಮಾರ, ಪತ್ತಾರ, ಕಂಚುಕಾರ, ಕುಂಬಾರ, ಚರ್ಮಕಾರ, ನೇಕಾರ, ಗಾಣೀಗ ಮತ್ತು ಲೇಖಕ ವರ್ಗಗಳನ್ನು ಶಾಸನಗಳು ಗುರುತಿಸಿವೆ. ಬಡಗಿ ಅಥವಾ ಕಾಷ್ಠ ಕೆಲಸದವರನ್ನು ಕಾರ್ಲೆ, ಸಾಂಚೀ, ಸಾಲಿಹುಂಡಮ್ ಪ್ರಾಕೃತ ಶಾಸನಗಳಲ್ಲಿ 'ವಢಕಿ', 'ವಡಕೀನೋ', 'ವಢೀಕ' ಎಂದು ಕರೆಯಲಾಗಿದೆ. ಇವರನ್ನೇ ಸಂಸ್ಕೃತದಲ್ಲಿ 'ವಾರ್ಧಕಿ'ಗಳೆಂದಿರುವುದು ಈ 'ವಢಕಿ'ಗಳ ಕಾರ್ಯವು ಮರಗೆಲಸಕ್ಕೆ ಸೀಮಿತವಾಗದೆ ಶಿಲಾಮಾಧ್ಯಮಕ್ಕೂ ವಿಸ್ತರಿಸಿದುದ್ದರಿಂದ ಇವರನ್ನು 'ಸೇಲವಢಕಿನ್', ಸೇಲವದಾಕಿ' ಎಂದು ಅವರ ಕಲಾಕೃತಿಗಳನ್ನು 'ಸೇಲಕಮ', 'ಶಿಲಾಕಂಮಂತ', 'ಶೈಲಾಲಕ' ಎಂದು ಕರೆಯಲಾಗಿದೆ. ಇವುಗಳಲ್ಲಿ ಮೊದಲಿನವೆರಡು ಪ್ರಾಕೃತ ಪದಗಳಾದರೆ, ಕೊನೆಯದು ಮಿಶ್ರಭಾಷಾ (ಪ್ರಾಕೃತ–ಸಂಸ್ಕೃತ) ಪದವಾಗಿದೆ. ಈಗಿನ ಕನ್ನಡದ ಕಲ್ಕುಟಿಗರು ಆಗಿನ ಪ್ರಾಕೃತದ 'ಪಸನಿಕ'ರಾಗಿದ್ದರು. ಇವರಲ್ಲಿ ಮೇಲ್ಪದರಿಗೆ ಸೇರಿದವರನ್ನು 'ರೂಪಕಾರಕ', 'ರೂಪದಖ' ಎಂದು ಗುರುತಿಸಲಾಗಿತ್ತು. ಶಿಲ್ಪಗಳನ್ನು ಮತ್ತು ವಾಸ್ತುಘಟಕಗಳನ್ನು ಶಿಲ್ಪಿಯೇ ನಿರ್ವಹಿಸುತ್ತಿದ್ದನೋ ಅಥವಾ ಇದಕ್ಕಾಗಿ ಪ್ರತ್ಯೇಕ ವರ್ಗವಂದಿತ್ತೋ ಎಂಬುದರ ಬಗೆಗೆ ಖಚಿತ ಮಾಹಿತಿ ಇಲ್ಲ. ಆದರೆ, ಮೌರ್ಯ ಕಾಲದಲ್ಲಿ ಇದೊಂದು ತುಂಬಾ ನೈಪುಣ್ಯ ಕಲೆಯಾಗಿತ್ತೆನ್ನುವುದನ್ನು ಇವರು ಸಾಧಿಸಿದ್ದ ಅಪೂರ್ವ ಬಗೆಯ, ಕನ್ನಡಿ ಹೊಳಪಿನ ನಯಗಾರಿಕೆ ತೋರಿಸಿಕೊಟ್ಟಿದೆ. ಈ ನಯಗಾರರನ್ನು 'ಮೀಠಕ'ರೆಂದು ಪ್ರಾಕೃತ ಭಾಷೆಯಲ್ಲಿ

ಕರೆಯುತ್ತಿದ್ದುದನ್ನು ಕನ್ಹೇರಿಯ ಒಂದು ಶಾಸನವು ತೋರಿ ಸಿಕೊಟ್ಟಿರುವುದು ಕನಗನಹಳ್ಳಿಯ ಶಾಸನದಲ್ಲಿ 'ಮಿತನಕ' ಎಂಬ ದಾನಿಯ ಹೆಸರು ಬಂದಿದೆ. ಈತನಿಗೂ ಮೀಠಕ ವೃತ್ತಿಗೂ ಇದ್ದ ಸಂಬಂಧವನ್ನು ತಿಳಯಲಾಗುತ್ತಿಲ್ಲ. ಇದು ಏನೇ ಇರಲಿ, ಇತಿಹಾಸದಲ್ಲಿ ಮೀಠಕನಾಗಿ ಮೊದಲ ಮಿಂಚಿದ ವ್ಯಕ್ತಿ 'ಖಡರಖ' ಎಂಬ ಕನ್ಹೇರಿಯ ಕಲಾಕರ್ಮಿ.

ಭಾರತೀಯ ಕಲಾ ಇತಿಹಾಸದಲ್ಲಿ 'ವಿಶ್ವಕರ್ಮ'ನೆಂಬ ಪೌರಾಣಿಕ ಪುರುಷನ ಹೆಸರು ಅಜರಾಮರವಾಗಿದೆ. ದಾಖಲೆಗಳಲ್ಲಿ ಈ ಹೆಸರನ್ನು ಮೊದಲು ಕಾಣುವುದು ಮೌರ್ಯೋತ್ತರ ಕಾಲದ ಬೌದ್ಧರ ಶಾಸನಗಳಲ್ಲಿ. ಉಜ್ಜೈನಿಯ ಗೋಪಾಲನೆಂಬ ಶಿಲ್ಪಿಯು 'ವಿಸಕಮ'ನೆಂದು ಗುರುತಿಸಿಕೊಂಡವರಲ್ಲಿ ಮೊದಲಿಗನಾಗಿದ್ದು, ಈತನನ್ನು ಹೆಸರಿಸುವ ಪ್ರಾಕೃತ ದಾಖಲೆಯು ಸಾಂಚಿಯಲ್ಲಿದೆ. ಸರಿಸುಮಾರು ಇದೇ ಕಾಲದಲ್ಲಿ ಈ ಪದವು ಕರ್ನಾಟಕದ ಮಳವಳ್ಳಿಯ ಪ್ರಾಕೃತ ಶಾಸನದಲ್ಲಿಯೂ ಬಂದಿತ್ತು. ವಿಶ್ವಕರ್ಮ ಎಂದೇ ಗುರುತಿಸಿಕೊಂಡಿದ್ದನ್ನು ಈ ಶಿಲ್ಪಿಗೆ ತನ್ನದೇ ಆದ ಹೆಸರಿದ್ದರೂ ಅದನ್ನವನು ತಿಳಿಸಿಲ್ಲ. ಈ ಕಾಲದ ಪ್ರಾಕೃತ ಶಾಸನಗಳಲ್ಲಿ ಸ್ಥಪತಿ ಮತ್ತು 'ಪಾಂಚಾನನ'ರ ಉಲ್ಲೇಖಗಳು ಬರುವುದಿಲ್ಲ. ಆದರೆ, ಇವರ ಸ್ಥಾನದಲ್ಲಿ ನವಕಮಿ, ಆವೇಸಿನಿ ಮುಂತಾದ ವಾಸ್ತುವಿಜ್ಞಾನಿಗಳ ಉಲ್ಲೇಖಗಳು ಬಂದಿವೆ. 'ಚತಿ', ಚತಿಯಘರ' ಮತ್ತು 'ವಿಹಾರ'ಗಳ ವಿನ್ಯಾಸಗಳನ್ನು ಸಿದ್ಧಪಡಿಸುವುದು. ಅವನ್ನು ವಾಸ್ತುಘಟಕಗಳನ್ನಾಗಿ ಪರಿವರ್ತಿಸುವುದು, ಕಾಲಕಾಲಕ್ಕೆ ನವೀಕರಿಸಿ ಅವನ್ನು ಸುಸ್ಥಿತಿಯಲ್ಲಿಡುವುದು ಇವರ ಕರ್ತವ್ಯವಾಗಿತ್ತು. ಈ ಸಾಲಿನಲ್ಲಿ ನಿಲ್ಲಬಹುದಾದ ಇನ್ನಿತರ ವಾಸ್ತುಶಿಲ್ಪಗಳನ್ನು ಶ್ರೇಣೀಕರಣಕ್ಕೆ ಒಳಪಡಿಸುವುದು ಸ್ವಲ್ಪ ಕಷ್ಟದಾಯಕ; ಆದರೆ ಇವರಲ್ಲಿ ರೂಪಕಾರರು, ವಢಕಿಗಳು, ಪಸನಿಕರು, ಮೀಠಕರು, ಕಸಕಾರರು, ಲೋಹವಾಣಿ ಮುಂತಾದವರು ಸೇರಿದ್ದರೆನ್ನಬಹುದು. ಗುಹೆಗಳನ್ನು ತೋಡುವ ವಿಧಾನವನ್ನು 'ಖಣಿ' ಅಥವಾ 'ಖಾನಿ' ಎಂಬ ಕ್ರಿಯಾ ಪದದಿಂದ ಸೂಚಿಸಲಾಗಿದೆ. ಇದು ಸಂಸ್ಕೃತದ ಉತ್ಖನನ ಪದದ ಒಡಲಿನಲ್ಲಡಗಿರುವ 'ಖನ'ವನ್ನು ನೆನಪಿಸುವುದು. 'ಚತಿಯಕಾರದ' ವಿನ್ಯಾಸಕಾರರು ಸಾಮಾನ್ಯವಾಗಿ ಸಂಘದ ಸದಸ್ಯರು ಭಿಕ್ಕುಗಳು ಆಗಿರುತ್ತಿದ್ದರು. ಕಾರಣ ತಮ್ಮ ಸೇವೆಗೆ ಆರ್ಥಿಕ ಪ್ರತಿಫಲವನ್ನೂ ಇವರು ನಿರೀಕ್ಷಿಸುತ್ತಿರಲಿಲ್ಲ. ಆದರೆ ಕೆಳವರ್ಗದ ಕಮಿಕರು ಅವರಂತೆ ಪ್ರತಿಫಲವನ್ನು ನಿರೀಕ್ಷಿಸುತ್ತಿರಲಿಲ್ಲ ಎನ್ನಲಾಗದು. ಕಮಿಕರಲ್ಲಿ ಬಹುತೇಕರು ತಮ್ಮ ಗುರುಹಿರಿಯರ ಊರುಕೇರಿಗಳ ವಿವರಗಳನ್ನು ಒದಗಿಸಿರುವರು; ಆದರೆ, ತಮ್ಮ ಸ್ಥಾನಮಾನದ ಬಗೆಗೆ, ಬಿರುದು ಬಾವಲಿಗಳ ಬಗೆಗೆ ಹೇಳಿಕೊಂಡಿದ್ದು ಅತ್ಯಲ್ಪ. ಮಧ್ಯ ಕಾಲದ ಶಿಲ್ಪಿಗಳಿಗೂ ಇವರಿಗೂ ಇದ್ದ ವ್ಯತ್ಯಾಸವೆಂದರೆ; ತಮ್ಮ ಹೆಗ್ಗಳಿಕೆಯನ್ನು ಢಣಾಡಂಗುರವಾಗಿ ಘೋಷಿಸಿಕೊಳ್ಳುತ್ತಿದ್ದ ಮಧ್ಯಕಾಲೀನ ಶಿಲ್ಪಿಗಳ ಪ್ರವೃತ್ತಿಯನ್ನು ಪ್ರಾಕೃತಕಾಲದ ಶಿಲ್ಪಿಗಳಲ್ಲಿ ಕಾಣುವುದಿಲ್ಲ. ಇದರಂತೆ ತಮ್ಮೊಡನೆ ಸ್ಪರ್ಧಿಸುತ್ತಿದ್ದ ಶಿಲ್ಪಿಗಳನ್ನು ಹೀನಾಯವಾಗಿ ಅವಹೇಳನ ಮಾಡುತ್ತಿದ್ದ ಪ್ರವೃತ್ತಿಯನ್ನು ಇವರಲ್ಲಿ ಕಾಣುವುದಿಲ್ಲ.

ಬೌದ್ಧಯುಗದ ವಾಸ್ತುಶಿಲ್ಪಿಗಳು ಮತ್ತು ಅವರಿಂದ ರಚಿತವಾಗಿರುವಂತಹ ಶಿಲ್ಪಗಳ ಪರಿಚಯವನ್ನು ನಾವಿನ್ನೂ ಮಾಡಿಕೊಳ್ಳಬೇಕಾಗಿದೆ. ಏಕೆಂದರೆ ಕಳೆದ ಸರಿಸುಮಾರು ಎರಡು ಶತಮಾನಗಳಲ್ಲಿ ಇವರನ್ನು ಹೊರಗಿಟ್ಟೇ ಬೌದ್ಧ ಕಲಾ ಇತಿಹಾಸವನ್ನು ರಚಿಸುತ್ತಾ ಬಂದಿರುವೆವು. ಈ ಜ್ಞಾನ ಕಂದಕವನ್ನು ಸ್ವಲ್ಪಮಟ್ಟಿಗಾದರೂ ತುಂಬಿಕೊಳ್ಳಲು ಈಗ ಪ್ರಯತ್ನಿಸಬೇಕಾಗಿದೆ. ಒಂದು ಕಾಲದಲ್ಲಿ ದೇಶವ್ಯಾಪಿಯಾಗಿದ್ದ ಬೌದ್ಧ ಕಲೆಯು ಬಹುಮುಖ್ಯವಾಗಿ ಪ್ರಾದೇಶಿಕ ಮತ್ತು ಸಾಂಸ್ಥಿಕ ಪ್ರಭೇದಗಳನ್ನು ಅರಿತುಕೊಳ್ಳುವುದು ಅಷ್ಟೇನು ಸುಲಭವಲ್ಲ. ಆದರೆ, ಲಭ್ಯವಿರುವ ಆಕರಗಳನ್ನು ಸರಿಯಾಗಿ ಬಳಸಿಕೊಂಡು, ರಾಷ್ಟ್ರೀಯ ನೆಲೆ ಮತ್ತು ಹಿನ್ನೆಲೆಯಲ್ಲಿ ಕೆಳದಖ್ಖನ್ನಿನ ಬೌದ್ಧ ಕಲಾ ಚರಿತ್ರೆಯನ್ನು ಇದಕ್ಕೆ ಕಾರಣರಾದ ಕಲಾಕಾರರನ್ನು ಪರಿಚಯಿಸಿಕೊಳ್ಳುವುದು ಅಸಾಧ್ಯವೇನೂ ಅಲ್ಲ.

ಕರ್ನಾಟಕ ರಾಜ್ಯದ ಸಂದರ್ಭದಲ್ಲಿ ಲಭ್ಯವಿರುವಂತಹ ಶಾಸನಗಳನ್ನು ಆಧರಿಸಿ ಬೌದ್ಧರ ಕಾಲದ ವಾಸ್ತುಶಿಲ್ಪಿಗಳನ್ನು ಎರಡು ಸ್ಥೂಲ ವರ್ಗಗಳ ತರಬಹುದೆನಿಸುವುದು: ಒಂದು ಯೋಜಕ, ವಿನ್ಯಾಸಕ ಹಾಗೂ ಮೇಲ್ವಿಚಾರಕರ ವರ್ಗ; ಇನ್ನೊಂದು ಕಟ್ಟಡ ಕಾರ್ಯದಲ್ಲಿ ನೇರವಾಗಿ ತೊಡಗಿಸಿಕೊಂಡ ಕಾರ್ಮಿಕ ವರ್ಗ. ಈ ಎರಡು ವರ್ಗಗಳಲ್ಲಿದ್ದ ಮುಖ್ಯ ಅಂತರವೆಂದರೆ; ಮೊದಲ ವರ್ಗಕ್ಕೆ ಸೇರಿದವರು ನೇರವಾಗಿ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಳ್ಳದಿರುವುದು ಮತ್ತು ಎರಡನೆಯ ವರ್ಗಕ್ಕೆ ಸೇರಿದವರು ವಿನ್ಯಾಸ ಕಾರ್ಯದಲ್ಲಿ ನೇರವಾಗಿ ತೊಡಗಿಸಿಕೊಳ್ಳದಿರುವುದು ಹೀಗಿದ್ದರೂ ಕೆಲವು ಬಾರಿ ಇವುಗಳಲ್ಲಿ ಹೊಂದಾಣಿಕೆಗಳು ಅತಿಕ್ರಮಣಗಳು ಆಗಿ, ಒಬ್ಬರ ಕ್ಷೇತ್ರದೊಳಗೆ ಇನೊಬ್ಬರು ಪ್ರವೇಶಿಸಿದ ಆಕಸ್ಮಿಕಗಳು ಇಲ್ಲದಿಲ್ಲ.ಮೊದಲ ವರ್ಗದಲ್ಲಿ ನವಕಮಿ (ಸಂ.ನವಕರ್ಮಿ) ಮತ್ತು ಆವೇಸಣಿ (ಸಂ.ಆವೇಶನಿ) ಎಂಬುವರು ಪ್ರಮುಖರಾಗಿದ್ದರೆ, ಎರಡನೆಯ ವರ್ಗದಲ್ಲಿ ಅತೇವಾಸಿನ್ (ಸಂ.ಅಂತೆವಾಸಿನ್) ವಡಕಿ (ಸಂ.ವರ್ಧಕಿ) ಅಚರಿಯ (ಸಂ.ಆಚಾರ್ಯ), ಉಪಝಾಯ (ಸಂ.ಉಪಾಧ್ಯಾಯ) ಮುಂತಾದವರು ಪ್ರಮುಖರಾಗಿದ್ದರು.

ಸಂಘದ ಸದಸ್ಯರು, ಭಿಕ್ಷುಗಳು ಮತ್ತು ನಿಕಾಯ ಪಂಡಿತರಾಗಿದ್ದ ನವಕಮಿಗಳನ್ನು ಸಾಂಚಿ, ಭಾರ್‌ಹುತ್, ಕನ್ಹೇರಿ, ಅಮರಾವತಿ, ನಾಗಾರ್ಜುನಕೊಂಡ ಮತ್ತು ಕನಗನಹಳ್ಳಿಯ ಶಾಸನಗಳು ಉಲೇಖಿಸುವವು. ಇವರಲ್ಲಿ ಕೆಲವರು 'ನವಕಮಿಕಪದಾನ'ರೆಂದು ಇನ್ನೂ ಕೆಲವರು 'ಮಹಾನವಕಮಿಕ'ರೆಂದು ಕರೆದುಕೊಂಡಿದ್ದರೆ, ಇನ್ನೂ ಕೆಲವರು ಸಂಘಗಳಲ್ಲಿದ್ದ ತಮ್ಮ ಸ್ಥಾನಗಳೊಡನೆ ಗುರುತಿಸಿಕೊಂಡವರು ಮೊದಲನೆಯದಕ್ಕೆ ನಿದರ್ಶನವಾದರೆ, ಪವಜಿತ, ಥೇರ, ಭದಂತ ಮುಂತಾದ ಪದಗಳಿಂದ ಗುರುತಿಸಿಕೊಂಡವರು ಎರಡನೆಯದಕ್ಕೆ ನಿದರ್ಶನರಾಗಿರುವರು. ಈ ನವಕಮಿಗಳ ಕಾರ್ಯಕ್ಷೇತ್ರ ನಮಗಿನ್ನೂ ಪರಿಚಯವಾಗಬೇಕಾಗಿದೆ. 'ಮಹಾವಂಶ'ದಲ್ಲಿ ಇವರನ್ನು 'ಕಮ್ಮಾಧಿಟ್ಠಾಯಕ'ರೆಂದು ಕರೆದಿರುವುದನ್ನು ಗಮನಿಸಿ.

ಓಲ್ಡೆನ್‌ಬರ್ಗ "ಕಟ್ಟಡಗಳು ಭಿಕ್ಷುಗಳಿಗಾಗಿದ್ದರೆ; ಆಗ ಭಿಕ್ಷುಗಳನ್ನು, ಭಿಕ್ಷುಣಿಗಳಿಗಾಗಿದ್ದರೆ ಆಗ ಭಿಕ್ಷಣಿಗಳನ್ನು ನವಕಮಿಗಳನ್ನಾಗಿ ನೇಮಕಮಾಡಿ, ಸಂಘದ ನಿಯಮಗಳನ್ನು ಅನುಸರಿಸಿ ಕೊಠಡಿಗಳ ಉದ್ದಳತೆ, ವಿನ್ಯಾಸ ಮುಂತಾದವು ಇರುವುದನ್ನು ಪ್ರಮಾಣಿಕರಿಸಿಕೊಳ್ಳಲಾಗುತ್ತಿತ್ತು ಎಂದಿರುವರು. ಆದರೆ ಭಿಕ್ಕುಣಿಗಳು ನವಕಮಿಗಳಾಗಿ ಕಾರ್ಯನಿರ್ವಹಿಸಿದ ಉದಾಹರಣೆಗಳು ಈವರೆಗೂ ಶಾಸನಗಳಲ್ಲಿ ಕಾಣಸಿಕ್ಕಿಲ್ಲ. ಇವರ ಪಾತ್ರಗಳನ್ನು ಮೂರು ವರ್ಗಗಳಡಿ ತರಬಹುದೆನಿಸುವುದು; ಅವುಗಳೆಂದರೆ;

1. ಯೋಜಕರಾಗಿ, ಕಾರ್ಯನಿರ್ವಾಹಕರಾಗಿ ಧಾರ್ಮಿಕ ಕೇಂದ್ರಗಳೊಡನೆ ಗುರುತಿಸಿಕೊಂಡ ವರ್ಗ
2. ಸಾಮಾನ್ಯ ಉಪಾಸಕರಂತೆ ದಾನಕಾರ್ಯದಲ್ಲಿ ಕಾಣಿಸಿಕೊಂಡ ವರ್ಗ ಮತ್ತು
3. ಸಂಬಂಧಿಗಳು ಶಿಷ್ಯಂದಿರೂ ಅನುಷಂಗಿಕವಾಗಿ ಸ್ಮರಿಸಿದ ವರ್ಗ.

ಧಾರ್ಮಿಕ ಕೇಂದ್ರಗಳ ಅಭಿವೃದ್ಧಿಯಲ್ಲಿ ನವಕಮಿಗಳ ಪಾತ್ರವಿದ್ದುದೇನೆ ನಿಜ, ಆದರೆ ಈ ಕಾಲದ ನೂರಾರು ಕೇಂದ್ರಗಳಲ್ಲಿ ಇವರು ಕಾಣಿಸಿಕೊಂಡಿರುವುದು ಬೆರಳೆಣಿಕೆಗೆ ಸಿಗುವಷ್ಟು ಸಂಖ್ಯೆಯ ಕೇಂದ್ರಗಳಲ್ಲಿ ಮಾತ್ರ. ಸಂಖ್ಯೆಯಲ್ಲಿ ಅಷ್ಟೇನೂ ಮಹತ್ವವಲ್ಲವೆನಿಸಿದರೂ ಅವರು ವಹಿಸಿದ ಪಾತ್ರವು ಮಹತ್ವದ್ದೇ ಆಗಿತ್ತು. ಯೋಜಕರಾಗಿ, ಕಾರ್ಯನಿರ್ವಾಹಕರಾಗಿ, ಇವರು ಕನ್ಹೇರಿಯಲ್ಲಿ ಕಾಣಿಸಿಕೊಳ್ಳುವುದು 'ರಾಜೋ ಗೊತಮಿಪುತ ಸಾಮಿಸಿರಿಯಜ್ಞಸಾತಮ್ನಿ'ಯ ಆಳ್ವಿಕೆಯ ಕಾಲದಲ್ಲಿ (ಸು.ಕ್ರಿ.ಶ.ಒಂದು, ಎರಡನೆಯ ಶತಮಾನ) ಭಾದನೀಯ ನಿಕಾಯದ ಅಚರಿಯರಿಗಾಗಿ ಚೆತಿಯೊಂದನ್ನು ನಿರ್ಮಿಸುವ ಇಂಗಿತವನ್ನು ವಾಣಿಜಕ ಕುಟುಂಬವೊಂದು ವ್ಯಕ್ತಪಡಿಸಿದಾಗ, ಇದನ್ನು ಯೋಜಿಸಲು ಮುಂದಾಗಿದ್ದು, ಪವಜಿತ, ಥೇರ, ಭದತ ಎಂಬ ಹಿರಿಯರನನ್ನೂ ಪೂಜ್ಯರನ್ನೂ ಒಳಗೊಂಡ ಭಿಕ್ಷು ಬಳಗವು. ಇವರಲ್ಲಿದ್ದ ಪ್ರಮುಖ ವ್ಯಕ್ತಿಗಳೆಂದರೆ ಅಚಲ, ಗಹಲ, ವಿಜಯಮಿತ, ಬೋಧಿಕ ಮತ್ತು ಧಮ್ಮಪಾಲ ಎಂಬ ನವಕಮಿಗಳು. ಈ ಯೋಜನೆಯ ಪೋಷಕನಾಗಿದ್ದವನು ಶೇಣಕ ಮುಖ್ಯನಾದ (ಶ್ರೇಣಿ ನಾಯಕನಾದ) ಅಪರೇಣುಕನೆಂಬ ಉಪಾಸಕನು. ಈ ಚೆತಿಯನ್ನು ತೊಡುವ ಕಾರ್ಯದಲ್ಲಿ ತೊಡಗಿಸಿಕೊಂಡವರು ಸೆಲವಢಕಿ, ನಾಯಕಮಿಸ, ಕಢಿಚಕ, ಮಹಾಕಟಕ, ಮೀಠಕ ಎಂಬ ವೃತ್ತಿವರ್ಗದವರು ಇವರಾರನ್ನೂ ವ್ಯಕ್ತಿಗತ ಹೆಸರಿನಿಂದ ಗುರು ತಿಸಿಲ್ಲ, ಆದರೆ ಇವರ 'ಉಪರಖಿತ' ಅಥವಾ ಮೇಲ್ವಿಚಾರಕರನ್ನು 'ಭದತಸೆಲ್ಲಮ್ಮ'ನ ಶಿಷ್ಯ 'ಭದತ ಬೋಧಿಲ'ನೆಂದು ಗುರುತಿಸಲಾಗಿದೆ. ಈ ಉಪರಖಿತನ ಅಂತಸ್ತು ನವಕಮಿಗಳ ಅಂತಸ್ತಿಗಿಂತ ಸ್ವಲ್ಪ ಕೆಳಗಿನದಾಗಿತ್ತೆನಿಸುವುದು. ಈಗಾಗಲೇ ಕಂಡಂತೆ ಈ ಮೇಲ್ವರ್ಗದ ಭದತರು ಯೋಜಕರಾಗಿ, ಸಲಹೆಗಾರರಾಗಿ ಮಾರ್ಗದರ್ಶನ ಮಾಡುತ್ತಿದ್ದರೇ ವಿನಃ ಚೆತಿಯ ನಿರ್ಮಾಣದಲ್ಲಿ ಕಾರ್ಮಿಕರಾಗಿ ಪಾಲ್ಗೊಳ್ಳುತ್ತಿರಲಿಲ್ಲ. ಚೆತಿಯನ್ನು ಉತ್ಖನಿಸುವ ಹೊಣೆಗಾರಿಕೆಯನ್ನು ವಢಕ ವರ್ಗಕ್ಕೆ ಸೇರಿದ ನಾಲ್ಕು ಕರಕು ಶಲಗಳು ವಹಿಸಿಕೊಂಡಿರುವುದು ಸ್ಪಷ್ಟವಿದೆ. ಆದರೆ, ಇಲ್ಲಿಯ ವಡಕರನ್ನು ಸಲೆಮಿಗಳೆಂದು,

ಮೀಠಕರನ್ನು ನಯಗಾರನೆಂದು ಗುರುತಿಸಿದಂಥೆ, ನಾಯಕಮಿಕ, ಕಢಿಚಕ ಮತ್ತು ಮಹಾಕಟಕರ ಕಾರ್ಯಕ್ಷೇತ್ರಗಳನ್ನು ಗುರುತಿಸಲಾಗುತ್ತಿಲ್ಲ. ಆದರೆ ಇವರೆಲ್ಲರೂ ಗುಹಾಲಯಗಳನ್ನು ತೋಡುವ ತಂತ್ರಗಾರರಾಗಿದ್ದರೆಂಬುವು ಅನುಮಾನವಿಲ್ಲ. ಚೆತಿಯಘರ ಮತ್ತು ಲೇಣಗಳ ಉತ್ಖನನ ವಿಧಾನದ ಬಗೆಗೆ ಮತ್ತು ಇವುಗಳಲ್ಲಿ ತೊಡಗಿಸಿಕೊಂಡವರ ಬಗೆಗೆ ಈ ಶಾಸನವು ಒದಗಿಸುವಷ್ಟು ವಿವರಗಳನ್ನು ಇನ್ನಾವ ಸಮಕಾಲೀನ ಶಾಸನವೂ ಒದಗಿಸಿಲ್ಲ. ಇದಕ್ಕೆ ಹೋಲಿಕೆಯಾಗಬಹುದಾದ ಇನ್ನೊಂದು ನಿದರ್ಶನವು ನಾಗಾರ್ಜುನ ಕೊಂಡದಲ್ಲಿದೆ. ಇಕ್ಷ್ವಾಕು ಅರಸ ಮದಾರೀಪುತ ವಿರಪುರುಸದತ್ತನ ಆಳ್ವಿಕೆಯ 14ನೆಯ ವರ್ಷದಲ್ಲಿ (ಕ್ರಿ.ಶ. ಮೂರನೆಯ ಶತಮಾನ) ರಾಜ್ಯದ ಕೋಷ್ಠಾಗಾರ ಕುಟುಂಬಕ್ಕೆ ಸೇರಿದ ಉಪಾಸಿಕಾ ಬೋಧಿಸಿರಿ ಎಂಬವಳು. 'ತಂಬಪಮ್ನ'ದ (ತಾಮ್ರಪರ್ಣಿ–ಶ್ರೀಲಂಕಾ) ಥೇರರಿಗಾಗಿ ವಿಜಯಪುರ ಮತ್ತು ಕಂಟಕ ಸೆಲ (ಧಾನ್ಯಕಟಕ)ದಲ್ಲಿ ಕುಹಲ ಮತ್ತು ಸಿಹಲ ಎಂಬೆರಡು ವಿಹಾರಗಳನ್ನು ಒಂದು ಬೋಧಿರುಖ ಪಾಸಾದವನ್ನು, ಒಂದು ಚೆತಿಯಘರವನ್ನು ಕೆಲವು ಓವರಿಕಾ (ಕೋಣೆಗಳ), ಮಂಡವಖಂಬೊ (ಸ್ತಂಭಮಂಟಪ), ಪಧಾನಸಾಲಾ (ಪಡಸಾಲೆ), ತಳಾಕ (ತಟಾಕ), ಸೆಲಮಂಡವ (ಶಿಲಾಮಂಟಪ)ಗಳನ್ನು ನಿರ್ಮಿಸುವ ಸಂಕಲ್ಪ ಮಾಡಿಕೊಂಡಾಗ ಇವನ್ನು ಯೋಜಿಸಿಕೊಡಲು ಮುಂದಾದವರು ನವಕಮಿಗಳಾದ ಚಂದಮುಖ, ಧಮ್ಮನಂದಿ ಮತ್ತು ನಾಗ ಎಂಬ ಥೇರರು. ಇದನ್ನು ಕಾರ್ಯಗತಗೊಳಿಸಿ ಕೊಟ್ಟವನು ಸೆಲವಢಕಿ ವಿಧಿಕನು. ಇವರೆಲ್ಲ ಜಂಟಿ ಪರಿಶ್ರಮದ ಫಲವಾಗಿ ನಾಗಾರ್ಜುನಕೊಂಡವು ಶತಮಾನದ ಅತಿ ದೊಡ್ಡ ಕೇಂದ್ರವಾಯಿತು ಮಾತ್ರವಲ್ಲ ಭಾರತದಲ್ಲಿ ಶ್ರೀಲಂಕ ಬೌದ್ಧರ ಮೊದಲ ನೆಲೆಯಾಗಿ ಹೊರಹೊಮ್ಮಿತು.

ಸುಮಾರು ಇದೇ ಕಾಲದಲ್ಲಿ ಇಲ್ಲಿಯ ಅಪರಮಹಾವಿನ ಸೆಲಿಯ ಬೌದ್ಧಪಂಥದ ಮಹಾಚೆತಿಯು ಎರಡು ಹಂತದ ನವೀಕರಣಕ್ಕೊಳಗಾಗಿತ್ತು. ಇವುಗಳಲ್ಲೊಂದರಲ್ಲಿ ರಾಮ್ನೋಸಿರಿವಿರಪುರುಸದತನು ತೊಡಗಿಸಿಕೊಂಡಿದ್ದರೆ. ಇನ್ನೊಂದರಲ್ಲಿ ಅರಸಿ ಬಪಸಿರಿಣಿಕಾ ತೊಡಗಿಸಿಕೊಂಡಿದ್ದಳು. ಈ ಅರಸಿಯ ನೆರವಿಗೆ ನಿಂತು, ಇದನ್ನು ಯೋಜಿಸಿಕೊಟ್ಟವನು ಭದತ ಆನಂದನು. ಈ ಆನಂದನು ನವಕಮಿ ಮಾತ್ರವಲ್ಲದೆ, ದೀಘ ಹಾಗೂ ಮಜ್ಜಿಮ ನಿಕಾಯ ಮತ್ತು ಪಂಥ (ಪಂಚ) ಮಾತುಗಳ ಪಂಡಿತನಾಗಿದ್ದನು. ಅದಂರೆ ಸುತ್ತಪೀಠಕದ ಐದು ಶಾಖೆಗಳಾದ ದೀಘ, ಮಜ್ಜಿಮ, ಸಂಯುಕ್ತ, ಅಂಗುತ್ತರ ಮತ್ತು ಬುದ್ಧ ನಿಕಾಯಗಳಲ್ಲಿ ಪರಿಣಿತನಾಗಿದ್ದನೆಂದು ಅರ್ಥ. ಈ ಬಗೆಯ ನಿಕಾಯ ಪಂಡಿತರನ್ನು ಸಾಂಚೀ ಮತ್ತು ಭಾರ್‌ಹುತ್ ಶಾಸನಗಳಲ್ಲೂ ಕಾಣಲಾಗಿದೆ. ಆದರೆ ಅವರು ನವಕಮಿಗಳೆಂದು ಗುರುತಿಸಿಕೊಂಡಿಲ್ಲ. 'ಮಹಾವಂಸ'ದಲ್ಲಿ ಸೂಚಿಸಿರುವ ನವಕಮಿಗಳ ಪಾತ್ರ ಹಿನ್ನೆಲೆಯಲ್ಲಿ ನೋಡಿದರೆ, ಕನ್ಹೇರಿ ಹಾಗೂ ನಾಗಾರ್ಜುನಕೊಂಡದ ನವಕಮಿಗಳ ಆಸಕ್ತಿ ಈ ಧಾರ್ಮಿಕ ಕಟ್ಟಡಗಳು ಸಂಘದ ನಿಯಮಗಳನ್ನು ಪರಿಪಾಲಿಸಿವೆಯೋ ಇಲ್ಲವೋ ಎಂಬುದನ್ನು ಖಚಿತಪಡಿಸಿಕೊಳ್ಳುವ ಕಡೆ ಹೆಚ್ಚು ವಾಲಿತ್ತೆನಿಸುವುದು. ಇದು ಏನೇ ಇರಲಿ, ಇವರ ಸಲಹೆ ಸೂಚನೆಗಳು,

ಹಂತಹಂತದ ಮಾರ್ಗದರ್ಶನಗಳು ಚೆತಿಗಳ ನಿರ್ಮಾಣಕ್ಕೆ ತುಂಬಾ ಉಪಯುಕ್ತವಾಗಿದ್ದವೆನ್ನುವುದರಲ್ಲಿ ಸಂಶಯವಿಲ್ಲ. ಮೇಲಿನ ಎರಡು ನಿದರ್ಶನಗಳು ಕಾರ್ಯನಿರ್ವಾಹಕರಾಗಿ ನವಕಮಿಗಳು ಚೆತಿಯ ನಿರ್ಮಾಣ ಕಾರ್ಯದಲ್ಲಿ ಹೇಗೆ ಮತ್ತು ಎಷ್ಟು ತೊಡಗಿಸಿಕೊಂಡಿದ್ದರೆಂಬುದನ್ನು ಪರಿಚಯಿಸಿದರೆ, ಸಾಂಚೀ ಮತ್ತು ಭಾರ್‌ಹುತ್‌ನಲ್ಲಿರುವ ಇನ್ನೆರಡು ಶಾಸನಗಳು ಇವರನ್ನು ದಾನಿಗಳನ್ನಾಗಿ ಪರಿಚಯಿಸುವುವು. ಆಯಪಸಕನ ಅತೇವಾಸಿ (ಶಿಷ್ಯ)ಯಾದ ಧಮಗುತನೆಂಬ ನವಕಮಿಯು ಇಲ್ಲಿಯ ಥೂಪಕ್ಕೆ ದಾನ ಮಾಡಿದ ವೇತಿಯ ವಿವರವನ್ನು ಸಾಂಚೀ ಶಾಸನವು ಕೊಡುವುದು; ಭಾನಕ (ಭೋದಕ)ನೂ ಭದತನೂ ಆದ ಆಯ ಇಸಿಕಾಲಿ ಎಂಬ ನವಕಮಿಯು ಥೂಪಕ್ಕೆ ದಾನಮಾಡಿದ ಖಬ (ಸ್ತಂಭ)ದ ವಿವರವನ್ನು ಭಾರ್‌ಹುತ್ ಶಾಸನ ಕೊಡುವುದು. ಇಲ್ಲಿ ಕುತೂಹಲ ಕೆರಳಿಸುವ ಅಂಶವೆಂದರೆ, ಎಲ್ಲವನ್ನೂ ತ್ಯಜಿಸಿ ಸಂಘಸೇರಿದ ಭದತರು ಸ್ವತಃ ದಾನಮಾಡಲು ಯಾವ ಬಗೆಯಲ್ಲಿ ಆರ್ಥಿಕ ಸಬಲತೆಯನ್ನು ಪಡೆದುಕೊಂಡಿದ್ದರು ಎಂಬುದು ಭಿಕ್ಷೆಯಿಂದ ಸಂಗ್ರಹಿಸಿದ ಆದಾಯವನ್ನು ಅವರು ಇದಕ್ಕೆ ವಿನಿಯೋಗಿಸಿರುವ ಒಂದು ಸಾಧ್ಯತೆ ಇದೆ. ಅನುಯಾಯಿಗಳೇ ಅವರ ಹೆಸರಿನಲ್ಲಿ ದಾನ ಮಾಡಿದ ಸಾಧ್ಯತೆ ಇನ್ನೊಂದಾಗಿದೆ; ತಮ್ಮ ಪೂರ್ವಾಶ್ರಮದ ಕುಟುಂಬದವರಿಂದಲೇ ಧರ್ಮಕಾರ್ಯವನ್ನು ಇವರು ನೇರವೇರಿಸಿಕೊಂಡದ್ದು ಮೂರನೆ ಸಾಧ್ಯತೆಯಾಗಿದೆ. ಇದೇನೆ ಇರಲಿ, ಈ ಕಾಲದ ಒಂದು ವೈಶಿಷ್ಟ್ಯವೆಂದರೆ, ಕುಟುಂಬವನ್ನು ತೊರೆದು ಸಂಘ ಸೇರಿದ ಮೇಲೂ ಭಿಕ್ಷು ಮತ್ತು ಭಿಕ್ಷುಣಿಯರು ದಾನ ಕಾರ್ಯಗಳಲ್ಲಿ ತಮ್ಮ ಪೂರ್ವಾಶ್ರಮದ ಸಂಬಂಧಿಗಳನ್ನು ಒಳಗೊಳಿಸಿಕೊಳ್ಳುತ್ತಿದ್ದುದು. ಇಂತಹ ಉದಾಹರಣೆಗಳು ಶಾಸನಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಬಂದಿವೆ. ಅಮರಾವತೀ ಮತ್ತು ಕನಗನಹಳ್ಳಿಯಲ್ಲಿ ನವಕಮಿಗಳ ಪಾತ್ರವು ಮೇಲಿನವರ ಪಾತ್ರಗಳಿಗಿಂತ ಭಿನ್ನವಾಗಿದೆ. ಇಲ್ಲಿ ಅವರ ಉಲ್ಲೇಖಗಳಿಗೆ ಅವರ ಶಿಷ್ಯ-ಶಿಷ್ಯತಿಯರು ಮತ್ತು ಬಂಧು ಬಳಗದವರು ಕಾರಣರಾಗಿದ್ದು, ಇದರಲ್ಲಿ ನವಕಮಿಗಳ ಪಾತ್ರವೇನೂ ಇಲ್ಲ ಅಮರಾವತೀಯ ಶಾಸನದಲ್ಲಿ ಭಿಕ್ಷುಣಿ ಬುದ್ಧರಖೀತಳು ತಾನು ನವಕಮಿ ಥೇರಭದತನ ಶಿಷ್ಯಳೆಂದು ಹೇಳಿಕೊಂಡರೆ" ಕನಗನಹಳ್ಳಿಯ ಮೂರು ಶಾಸನಗಳಲ್ಲಿ ಎರಡು ಹಿಮಾಲಯ (ಹಿಮತ್ವಶಾಖೆಯ) ನವಕಮಿಗಳಾದವರನ್ನು ಅವರ ಶಿಷ್ಯ-ಶಿಷ್ಯತಿಯರು ಸ್ಮರಿಸಿರುವರು. ಇನ್ನೊಂದು ಶಾಸನದಲ್ಲಿ ತಾಯಿಯೊಬ್ಬಳು ತನ್ನ ಭಿಕ್ಷುಪುತ್ರನನ್ನು ನೆನೆಪಿಸಿಕೊಂಡಿರುವಳು. ಕುಟುಂಬದಿಂದ ದೂರ ಸರಿದು ಸಂಘ ಸೇರಿದ್ದ ಭಿಖ್ಖುಪುತ್ರನ ಸ್ಮರಣೆಯನ್ನು ಅವರ ಪೂರ್ವಾಶ್ರಮದ ತಾಯಿ ಮಾಡಿರುವುದು ಇಲ್ಲಿಯ ವಿಶೇಷತೆ.

## ಗ್ರಂಥಸೂಚಿ


- ಜಯದೇವಿ ಗಾಯಕವಾಡ, ***ಕರ್ನಾಟಕದ ಬೌದ್ಧ ಕೇಂದ್ರಗಳು,*** ಗುಲಬರ್ಗಾ,2001
- ತಾಳ್ತಜೆ ವಸಂತಕುಮಾರ, ***ಬೌದ್ಧಯಾನ,*** ಮುಂಬಯಿ.2005
- ತಾಳ್ತಜೆ ವಸಂತಕುಮಾರ, ***ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ,*** ಬೆಂಗಳೂರು,1988
- ತಾಳ್ತಜೆ ವಸಂತಕುಮಾರ, ***ಕನ್ನಡದಲ್ಲಿ ಬೌದ್ಧ ಸಾಹಿತ್ಯ,*** ಮುಂಬಯಿ.2005
- ತಾಳ್ತಜೆವಸಂತಕುಮಾರ,***ಹೈದ್ರಾಬಾದ ಕರ್ನಾಟಕದ ಬೌದ್ಧಧರ್ಮ ಒಂದು ಒಳನೋಟ,***ಮುಂಬಯಿ.2006
- ಷಡಕ್ಷರಯ್ಯ. ರು.ಮ, ***ಪ್ರಾಚೀನ ಬೌದ್ಧ ಕೇಂದ್ರ ಸನ್ನತಿ,*** ಗುಲಬರ್ಗಾ,2007
- ಚಿದಾನಂದ ಮೂರ್ತಿ. ಎಂ, ***ಕನ್ನಡ ಶಾಸನಗಳ ಸಂಸ್ಕೃತಿಕ ಅಧ್ಯಯನ,*** ಬೆಂಗಳೂರು,1988
- ಫೋಗೆಲಿಸ್, ಲಾರ್ಸ್, ***ಭಾರತೀಯ ಬೌದ್ಧಧರ್ಮದ ಪುರಾತತ್ತ್ವ ಇತಿಹಾಸ,*** ಮುಂಬಯಿ.2006
- ಲಾಹಿರಿ, ನಯನ್ಜೋತ್, ***ಪ್ರಾಚೀನ ಭಾರತದಲ್ಲಿ ಅಶೋಕ,*** ಮುಂಬಯಿ.2004